**ದಿನಾಂಕಃ 16–03–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿಗಳ ಪರ ವಕೀಲರಿಂದ**

2. ಮುಗ್ಗನಹಳ್ಳಿ ನನ್ನ ಸ್ವಂತ ಊರು, ನಾನು ಹುಟ್ಟಿ ಬೆಳದದ್ದು ಮುಗ್ಗನಹಳ್ಳಿ ಗ್ರಾಮದಲ್ಲಿ. ನಾನು ಮುಗ್ಗನಹಳ್ಳಿ ಗ್ರಾಮದಲ್ಲಿ ಹುಟ್ಟಿ ಬೆಳದದ್ದು ಎಂದು ತೋರಿಸುವ ಬಗ್ಗೆ ನನ್ನ ಬಳಿ ದಾಖಲಾತಿಗಳು ಇರುತ್ತವೆ. ಕಡೂರಿನ ಬಳಿ ನನ್ನ ಹೆಸರಿನಲ್ಲಿ ಮನೆ ಹಾಗೂ ಜಮೀನು ಇರುವುದಿಲ್ಲ, ಕಡೂರಿನ ಬಳಿ ನನ್ನ ಪತ್ನಿಯ ಹೆಸರಿನಲ್ಲಿ ಆಸ್ತಿ ಇರುತ್ತದೆ. ಸುಮಾರು 25–30 ವರ್ಷದಿಂದ ಕಡೂರಿನ ಬಳಿ ಇರುವ ಆಸ್ತಿಯನ್ನು ನಾವು ಅನುಭವಿಸುತ್ತಿದ್ದೇವೆ ಆದರೆ ನಾವು ಕಡೂರಿನ ಬಳಿ ವಾಸವಾಗಿರುವುದಿಲ್ಲ. ಕಡೂರಿನ ಬಳಿ ಇರುವ ನಮ್ಮ ಮನೆಯಲ್ಲಿ ಆಳುಗಳು ವಾಸವಾಗಿರುತ್ತಾರೆ. ನನ್ನ ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡು ಕಡೂರಿನ ವಿಳಾಸದಲ್ಲಿ ಸಹ ಇರುತ್ತವೆ ಎಂದರೆ ಸರಿಯಲ್ಲ. ನಾನು ಇಂದಿಗೂ ಸಹ ಕಡೂರಿನ ಬಳಿಯೇ ವಾಸವಾಗಿದ್ದು ನಾವು ಮುಗ್ಗನಗಹಳ್ಳಿಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಹಾಗೂ ನಮ್ಮ ನಡುವೆ ಯಾವುದೇ ರಕ್ತ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮುಗ್ಗನಹಳ್ಳಿಯಲ್ಲಿ ಆರೋಪಿಗಳ ತಂದೆ ತಾಯಿ ಹೆಸರಿನಲ್ಲಿ ಜಮೀನು ಇರುತ್ತದೆ ಎಂದರೆ ಸರಿ. ಆರೋಪಿಗಳ ತಂದೆ ತಾಯಿಯ ಹೆಸರಿನಲ್ಲಿರುವ ಜಮೀನಿನಲ್ಲಿ ನನಗೂ ಸಹ ಭಾಗ ಬರಬೇಕು ಎನ್ನುವ ಕಾರಣದಿಂದ ನಾನು ಕೆಲವು ವ್ಯಕ್ತಿಗಳ ಜೊತೆ ಸೇರಿ ಆರೋಪಿಗಳ ವಿರುದ್ದ ಜಗಳ ಆಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮುಗ್ಗನಹಳ್ಳಿಯಲ್ಲಿ ಅವರ ತಂದೆ ತಾಯಿಯ ಹೆಸರಿನಲ್ಲಿ ಇರುವ ಜಮೀನಿನಲ್ಲಿ ಉಳುವೆ ಮಾಡುತ್ತಿದ್ದಾರೆ ಎಂಬ ವಕೀಲರ

ಸಲಹೆಗೆ ಸಾಕ್ಷಿದಾರರು ನಮ್ಮ ತಂದೆಯ ಹೆಸರಿನಲ್ಲಿ ಮುಗ್ಗನಹಳ್ಳಿಯಲ್ಲಿರುವ ಜಮೀನಿನಲ್ಲಿ ಆರೋಪಿಗಳು ಜಗಳ ತೆಗೆದು ಉಳುಮೆ ಮಾಡುತ್ತಿದ್ದಾರೆ ಎಂದು ಉತ್ತರಿಸಿರುತ್ತಾರೆ. ಅವರ ತಂದೆ ಮೃತಪಟ್ಟ ನಂತರ ಆರೋಪಿಗಳು ಅವರ ತಂದೆ ಹೆಸರಿನಲ್ಲಿದ್ದ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಪೊಲೀಸರ ಜೊತೆ ಶಾಮೀಲಾಗಿ ಆರೋಪಿಗಳ ವಿರುದ್ಧ ಹಲವಾರು ಸುಳ್ಳು ಪ್ರಕರಣಗಳನ್ನು ದಾಖಲ್ಮಾಡಿಸಿರುತ್ತೇನೆಂದರೆ ಸರಿಯಲ್ಲ.

3. ದಿಃ09.05.2024 ಹಾಗೂ ದಿಃ10.05.2024 ರಂದು ನೀವು ಎಲ್ಲಿದ್ದಿರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ತಾನು ಮುಗ್ಗನಹಳ್ಳಿಯಲ್ಲಿರುವ ತನ್ನ ತಂದೆಗೆ ಸೇರಿದ ಜಮೀನಿನಲ್ಲಿ ಇದ್ದೆ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆಗೆ ಸೇರಿದ ಜಮೀನು ಮುಗ್ಗನಹಳ್ಳಿ ಗ್ರಾಮದ ಸರ್ವೆ ನಂ.3/1 ರಲ್ಲಿರುತ್ತದೆ. ದಿಃ09.05.2024 ರಂದು ನಾನು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮುಗ್ಗನಹಳ್ಳಿ ಗ್ರಾಮದಲ್ಲಿರುವ ನಮ್ಮ ತಂದೆಗೆ ಸೇರಿದ ಜಮೀನಿನಲ್ಲಿ ಇದ್ದೆ. ದಿಃ10.05.2024 ರಂದು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ನಾನು ಮುಗ್ಗನಹಳ್ಳಿ ಗ್ರಾಮದ ನನ್ನ ತಂದೆಯ ಜಮೀನಿನಲ್ಲಿ ಇದ್ದೆ. ದಿಃ09.05.2024 ರಂದು ಹಾಗೂ ದಿಃ10.05.2024 ರಂದು ಮುಗ್ಗನಹಳ್ಳಿಯ ಜಮೀನಿನಲ್ಲಿ ನಾನು ಹಾಗೂ ನನ್ನ ಪತ್ನಿ ಗೌರಮ್ಮ ರವರು ಜೊತೆಯಲ್ಲಿದ್ದೆವು. ದಿಃ09.05.2024 ರಂದು ಜಮೀನಿನಲ್ಲಿ ಆಲೂಗಡ್ಡೆ ಬೆಳೆಯಲು ಜಮೀನನ್ನು ಉಳುಮೆ ಮಾಡಲು ಸಿದ್ದತೆ ನಡೆಸುತ್ತಿದ್ದೆವು. ಜಮೀನನ್ನು ನೇಗಿಲಲ್ಲಿ ಉಳುಮೆ ಮಾಡಿಸಿದ್ದು ಆನಂತರ ಜಮೀನಿನಲ್ಲಿ ಬಂದಿದ್ದ ಕಳೆಯನ್ನು ನಾವು ಆರಿಸುತ್ತಿದ್ದೆವು. ಆ ಕಾಲದಲ್ಲಿ ನಾನು ಹಾಗೂ ನನ್ನ ಪತ್ನಿಯನ್ನು ಹೊರತುಪಡಿಸಿ ಬೇರೆ ಯಾರೂ ಸ್ಥಳದಲ್ಲಿ ಇರಲಿಲ್ಲ. ಕೂಲಿ ಆಳುಗಳ

ಮೂಲಕ ನಾವು ಜಮೀನನ್ನು ಉಳುಮೆ ಮಾಡಿಸಿದ್ದೆವು.

ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಮುಂದಿನ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಗಿರುತ್ತದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.